# ಹೆಣ್ಣು ಆಳಲ್ಲ...

**◆ ಭಾಗ್ಯಾ ಪೊಲೀಸ್ ಅಧಿಕಾರಿಯಾಗಿದ್ದರೆ ಹೇಗಿರುತ್ತಿತ್ತು?**

ಇಷ್ಟು ಹೊತ್ತಿಗಾಗಲೇ ತಾಂಡವ್ ಜೈಲು ಸೇರಿರುತ್ತಿದ್ದರು. ಮಾತ್ರವಲ್ಲ, ಅವರ ಸ್ವಭಾವದ ಅನೇಕರು ಕಂಬಿ ಹಿಂದೆ ಇರುತ್ತಿದ್ದರು. ನ್ಯಾಯದ ಪರ ಎಂದು ಎಲ್ಲರೂ ಮಾತಿನಲ್ಲಿ ಹೇಳುತ್ತೇವೆ. ಆದರೆ, ಅದನ್ನು ಬದುಕಿನಲ್ಲಿ ರೂಢಿಸಿಕೊಂಡವರು ಎಷ್ಟು ಕಷ್ಟವನ್ನು ಅನುಭವಿಸುತ್ತಾರೆ ಎನ್ನುವುದು ಅವರಿಗೇ ಗೊತ್ತು. ಪೊಲೀಸ್ ಅಧಿಕಾರಿ ಆಗಿದ್ದರೆ ಸುಲಭವಾಗಿ ನ್ಯಾಯ ಸಿಗುತ್ತಿತ್ತು ಎಂದು ಅನ್ನಿಸುತ್ತದೆ. ಏಕೆಂದರೆ ಖಾಕಿ ಯೂನಿಫಾರಂ ಎಂದರೆ ಎಲ್ಲರಿಗೂ ಸಣ್ಣ ಭಯ ಇದ್ದೇ ಇರುತ್ತದೆ. ಇಲ್ಲಿ ಸಮವಸ್ತ್ರವೇ ಸಾಕಷ್ಟು ಕೆಲಸ ಮಾಡುತ್ತದೆ.

**◆ 'ನಾನು ಭಾಗ್ಯ' ಅಭಿಯಾನದ ಉದ್ದೇಶ ಏನು?**

ಇದುವರೆಗೆ ಭಾಗ್ಯಾಳ ತಲೆಯಲ್ಲಿ ಗಂಡನ ಮೇಲಿನ ಪ್ರೀತಿ ಮತ್ತು ನಂಬಿಕೆ ತುಂಬಿತ್ತು. ಮದುವೆಯಾದ ದಿನವೇ ಆತ 'ನಿನ್ನ ಮೇಲೆ ಒಲವು ಇಲ್ಲ' ಎಂದಿರುತ್ತಾನೆ. ಆದರೂ ಅವಳಿಗೆ ಎಲ್ಲೋ ವಿಶ್ವಾಸ. ಒಂದಲ್ಲ ಒಂದು ದಿನ ಎಲ್ಲ ಸರಿಹೋಗುತ್ತದೆ. ತನ್ನ ಗಂಡ ಸಿಡುಕನೇ ವಿನಃ ಮತ್ತೊಬ್ಬ ಹೆಣ್ಣಿನ ಹಿಂದೆ ಹೋಗಲಾರ ಎಂದು ಭಾವಿಸಿರುತ್ತಾಳೆ. ಎಲ್ಲಕ್ಕಿಂತ ಹೆಚ್ಚಾಗಿ ಇಬ್ಬರು ಮಕ್ಕಳಿದ್ದಾರೆ. ಅವರ ಮುಖ ನೋಡಿಯಾದರೂ ತನ್ನ ಸಂಸಾರ ಸರಿದೂಗುತ್ತದೆ, ಸಮಸ್ಯೆ ಪರಿಹರಿಯುತ್ತದೆ ಎಂದುಕೊಂಡಿದ್ದಳು. ಯಾವಾಗ ಆಕೆಗೆ ವಿಷಯ ಸ್ಪಷ್ಟವಾಗಿ ಡಿವೋರ್ಸ್ ಪ್ರಹಸನ ಆರಂಭವಾಗುತ್ತದೆಯೋ ಆಗಲೇ ವಾಸ್ತವ ಅರ್ಥವಾಗುತ್ತದೆ.

ಈಗ ಅವಳ ನಿರ್ಧಾರ ಏನಾಗಬೇಕು ಎನ್ನುವುದು ಪ್ರಶ್ನೆ. ಮಕ್ಕಳು, ಅತ್ತೆ ಮಾವ ಇದ್ದಾರೆ. ಅವರೆಲ್ಲರ ಕ್ಷೇಮ ಭವಿಷ್ಯದ ದೃಷ್ಟಿಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಿದೆ. ತನ್ನ ಬದುಕಿನಲ್ಲಿ ತಾಂಡವ್ ಏನೂ ಅಲ್ಲ. ಆತನಿಲ್ಲದೆ ಬದುಕಬಲ್ಲಳು ಎನ್ನುವುದನ್ನು ತೋರಿಸುವ ಸಮಯ.

**◆ 'ಹ್ಯಾಶ್ ಟ್ಯಾಗ್' ಆಂದೋಲನ ಮೂರು ವರ್ಷದ ಕಥೆಗೆ ಸುಖಾಂತ್ಯದ ಸೂಚನೆಯೇ?**

ಅಂತ್ಯ ಅಲ್ಲ, ಇದು ಆರಂಭ. ಕಳೆದ ಎರಡು ವರ್ಷದ ಕಥೆ, ಮಹಿಳೆಯರ ಬಗ್ಗೆ ಯಾವಾಗಲೂ ಪುರುಷರಲ್ಲಿ ಪೂರ್ವಗ್ರಹ ಇರುತ್ತದೆ. ಗಂಡ ಹೇಳಿದಂತೆ ಹೆಂಡತಿ ಕೇಳಬೇಕು ಎನ್ನುವುದೇ ಮೌಲ್ಯ ಆಗಿತ್ತು. ಅಂತೆಯೇ ಭಾಗ್ಯಾ ಬದುಕಿದ್ದಳು. ಆಕೆಯ ತಾಯಿ, ಏನೇ ಕಷ್ಟ ಬಂದರೂ ಹಿಂದಿರುಗಿ ಬರಬಾರದು ಎಂದೇ ಹೇಳಿದ್ದರು. ಎಲ್ಲ ಕಷ್ಟ ಕಳೆದು ಅವಳಿಗೆ ಹೊಸ ಬದುಕು ಆರಂಭ ಆಗುತ್ತಿದೆ. ಇದು ಭಾಗ್ಯಾಳ ಕಥೆ ಅಲ್ಲ. ಅವಳಂತಹ ಸಾವಿರಾರು ಹೆಣ್ಣುಮಕ್ಕಳ ಬದುಕು ಎನ್ನುವುದು ಈ ಅಭಿಯಾನದ ಉದ್ದೇಶ. ನೊಂದ ಜೀವಗಳಿಗೆ ಧೈರ್ಯ ತುಂಬಬೇಕು. ಅಂದರೆ ಅವರು ಸ್ವಾವಲಂಬಿಗಳಾಗಬೇಕು. ಆರ್ಥಿಕ ಸ್ವಾತಂತ್ರ್ಯ ಎಲ್ಲರಿಗೂ ಅನಿವಾರ್ಯ ಎನ್ನುವುದನ್ನು ಕಥೆ ಹೇಳ ಹೊರಟಿದೆ. ಇದು ಅನೇಕರಿಗೆ ಸ್ಫೂರ್ತಿ ಆಗಬಹುದು. ಕೊನೇಪಕ್ಷ ಒಂದಿಷ್ಟು ಕುಟುಂಬಗಳಲ್ಲಿ ಸುಧಾರಣೆ ಆಗಬಹುದು ಎನ್ನುವುದು ಅಪೇಕ್ಷೆ. ಎಷ್ಟೋ ಪೋಷಕರು, ಮಕ್ಕಳು, ಅತ್ತೆಯಂದಿರಲ್ಲಿ ಪ್ರೇರಣೆ ನೀಡಿರುವುದು ನನ್ನ ಅನುಭವಕ್ಕೆ ಬಂದಿದೆ. ಇಂತಹ ಭಾಗ್ಯ ಎಲ್ಲರಿಗೂ ಸಿಗುವಂತಹದ್ದಲ್ಲ.

**◆ 'ಅಯ್ಯೋ ಪಾಪದ ಜೀವ' ಅನ್ನೋದು ತಪ್ಪುತ್ತೆ?**

ಖಂಡಿತ ತಪ್ಪುತ್ತದೆ. ಆಕೆ ಫುಲ್ ಬದಲಾಗಿದ್ದಾಳೆ. ತನ್ನ ಸಮಸ್ಯೆಯನ್ನು ಮೆಟ್ಟಿ ನಿಲ್ಲುತ್ತಾಳೆ. ಸೆಟ್‌ನಲ್ಲಿ ಕಲಾವಿದರಾಗಿ ನಾವೇ ಎಂಜಾಯ್ ಮಾಡುತ್ತಿದ್ದೇವೆ. ತಾಂಡವ್‌ಗೆ ಈಗಾಗಲೇ ಸಣ್ಣ ಡೋಸ್ ಕೊಡುತ್ತಿದ್ದಾಳೆ. ದಾಂಪತ್ಯ ಎಂದರೆ ಯಾರೂ ಯಾರನ್ನೂ ಕೊಂಡುಕೊಂಡಿರುವುದಿಲ್ಲ. ಗಂಡು ಹೆಣ್ಣು ಸಮಾನವಾಗಿ ಬದುಕಬೇಕು. ಇಬ್ಬರಿಗೂ ವೈಯಕ್ತಿಕ ವ್ಯಕ್ತಿತ್ವಗಳು ಇರುತ್ತವೆ. ಗಂಡು ಹೆಣ್ಣು ಕೂಡಿ ಬಾಳಬೇಕು.

**◆ ಡಾನ್ಸರ್, ಆ್ಯಂಕರ್, ನಟಿಯಾಗಿ ಸೈ ಅನ್ನಿಸಿಕೊಳ್ಳಲು ಹೇಗೆ ಸಾಧ್ಯ ಆಯಿತು?**

ಜೀವನದಲ್ಲಿ ನನಗೆ ಆತ್ಮವಿಶ್ವಾಸದ ಕೊರತೆ ತುಂಬ ಇದೆ. ನನ್ನ 5ನೇ ವರ್ಷದಿಂದ ಡಾನ್ಸ್ ಕಲಿಯುತ್ತಿದ್ದೇನೆ. ಈಗಲೂ ಒಂದು ವೇದಿಕೆಗೆ ಹೋಗಲು ಅಳುಕು ಕಾಡುತ್ತದೆ. ಯಾರಾದರೂ 'ನೀವು ಭರತನಾಟ್ಯ ಪಟು ಅಲ್ವಾ' ಎಂದರೆ ಹೌದು ಎನ್ನುತ್ತೇನೆ. ಎಲ್ಲೂ ನಾನು ಡಾನ್ಸರ್ ಎಂದು ಹೇಳುವಷ್ಟು ವಿಶ್ವಾಸ ಇಲ್ಲ. ನಟನೆ, ಆ್ಯಂಕರ್ ಕೂಡ ಅಷ್ಟೆ. ಬಾಲ್ಯದ ದಿನಗಳಿಂದಲೂ ಅಪ್ಪ–ಅಮ್ಮ ಎಲ್ಲ ರಂಗದಲ್ಲೂ ನನ್ನ ಬೆಳೆಸಲು ಪ್ರೋತ್ಸಾಹಿಸಿದ್ದಾರೆ. ಇದಾದ ಮೇಲೆ ನಿರ್ದೇಶಕರು ನಿರ್ಮಾಪಕರು ಮುನ್ನಡೆಸುತ್ತಿದ್ದಾರೆ. ಈ ಕ್ಷೇತ್ರಕ್ಕೆ ಬರಬೇಕು ಎನ್ನುವ ಬಯಕೆ ನನಗೆ ಇರಲಿಲ್ಲ. ಹೇಗೋ ಬಂದಿದ್ದೇನೆ. ಒಂದಾದ ಮೇಲೆ ಒಂದು ಅವಕಾಶಗಳು ಸಿಗ್ತಾನೇ ಇವೆ. ಆ್ಯಂಕರಿಂಗ್ ಬೇಡ ಅನ್ನುತ್ತಲೇ ಸೃಜನ್ ಲೋಕೇಶ್ ಒತ್ತಾಯದಿಂದ ಮಾಡಿಸಿದರು. ಮೂರೂವರೆ ವರ್ಷ ಕೆನಡಾದಲ್ಲಿದ್ದೆ. ಅಲ್ಲಿಂದ ಬಂದ ತಕ್ಷಣ ಟೀವಿಯಲ್ಲಿ ಆ್ಯಂಕರಿಂಗ್ ಅವಕಾಶ ಸಿಕ್ಕಿತು. ಜನರ ಪ್ರತಿಕ್ರಿಯೆ ಚೆನ್ನಾಗಿ ಬಂತು. ಕೆಲಸವೇ ಆತ್ಮವಿಶ್ವಾಸ ತುಂಬಿದೆ.

■ **ರಾಘವೇಂದ್ರ ಕೆ.**



ಸುಷ್ಮಾ ರಾವ್
ಕಲರ್ಸ್ ಕನ್ನಡ
'ಭಾಗ್ಯ ಲಕ್ಷ್ಮೀ'ಯ
ಭಾಗ್ಯಾ